ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**

ನೂರ ನಲವತ್ತೊಂದನೆಯ ಅಧಿವೇಶನ

ಮಂಗಳವಾರ, ದಿನಾಂಕ: 29ನೇ ಸೆಪ್ಟಂಬರ್, 2020

ರೇಷ್ಮೆ ಬೆಳೆಗಾರರಿಗೆ ನೀಡುವ ಪ್ರೋತ್ಸಾಹಧನದ ಬಗ್ಗೆ

ಶ್ರೀ ಎಸ್.ರವಿ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-

966(1051) ಮಾನ್ಯ ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕೋವಿಡ್-19ರ ಲಾಕ್‌ಡೌನ್‌ನಿಂದ ನಷ್ಟ ಅನುಭವಿಸಿದ ರೇಷ್ಮೆ ಬೆಳೆಗಾರರಿಗೆ ಮತ್ತು ಡೀಲರ್ಸ್‌ಗಳಿಗೆ ಎಷ್ಟು ಪ್ರೋತ್ಸಾಹ ಧನವನ್ನು ನಿಗಧಿಪಡಿಸಿದೆ ಹಾಗೂ ಇದಕ್ಕಿರುವ ಮಾರ್ಗಸೂಚಿಗಳೇನು;

(ಆ) ರಾಮನಗರ ಜಿಲ್ಲೆ ರೇಷ್ಮೆ ಮಾರುಕಟ್ಟೆಗಳಿಗೆ ಬಂದಿರುವ ಅನುದಾನವೆಷ್ಟು; ಅದರಲ್ಲಿ ಎಷ್ಟು ಜನ ರೈತರಿಗೆ ಅನುದಾನ ವಿತರಣೆಯಾಗಿದೆ; ಉಳಿಕೆ ಎಷ್ಟು; (ವಿವರ ನೀಡುವುದು)

(ಇ) ಇದರಲ್ಲಿ ತಾಂತ್ರಿಕ ತೊಂದರೆಗಳು ಏನಾದರೂ ಇದೆಯೇ; ಇದ್ದಲ್ಲಿ ಆ ತಾಂತ್ರಿಕ ಕಾರಣಗಳು ಯಾವುವು; ತಾಂತ್ರಿಕ ಕಾರಣಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಯಾವ ಕ್ರಮಕೈಗೊಳ್ಳಲಾಗಿದೆ?